**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**<u>ಫೌಜುದಾರಿ ಪ್ರಕರಣ ಸಂಖ್ಯೆ :28/2024</u>**

**ಚಾ.ಸಾಃ 1, ಫ್ರಾ.ಸಾಃ1**

| | |
|---|---|
| ಸಾಕ್ಷಿದಾರನ ಹೆಸರು | ಲಕ್ಷ್ಮೀ ಹರಿಕಂತ್ರ |
| ಗಂಡನ ಹೆಸರು | ಸುಕ್ರ ಹರಿಕಂತ್ರ |
| ವಯಸ್ಸು | 42 ವರ್ಷಗಳು |
| ಉದ್ಯೋಗ | ಮನೆಕೆಲಸ |
| ವಾಸ್ತವ್ಯ | ತುದಳ್ಳಿ, ಮುರ್ಡೇಶ್ವರ ಹಾಲಿ ಮಂಕಿ, ತಾಃ ಹೊನ್ನಾವರ |

**<u>ಸಾಕ್ಷಿಯನ್ನು ದಿನಾಂಕಃ 11-02-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಎಪಿಪಿಯವರಿಂದ,</u>**

ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿದ್ದೇನೆ. 1 ನೇ ಆರೋಪಿ ನನ್ನ ದೊಡ್ಡಪ್ಪರವರ ಸೊಸೆ, 2 ನೇ ಆರೋಪಿ ಅವರ ಮಗಳು.

ಮಕ್ಕಳು ಸಣ್ಣ ಇದ್ದದ್ದರಿಂದ 2024 ರಲ್ಲಿ ನಾನು ನನ್ನ ತವರು ಮನೆಯಲ್ಲಿ ವಾಸವಾಗಿದ್ದೆ. ನಾವು ವಾಸವಾಗಿದ್ದ ಮನೆಯ ವಿಚಾರವಾಗಿ ನಮ್ಮ ದೊಡ್ಡಪ್ಪನ ಮಗ ಗೋವಿಂದನ ಹೆಂಡತಿ 1 ನೇ ಆರೋಪಿಗೂ ನಮ್ಮ ಮನೆಯವರಿಗೂ ಆಗಾಗ ಗಲಾಟೆ ಆಗುತ್ತಿತ್ತು.

ದಿನಾಂಕ 20-02-2024 ರಂದು ಬೆಳಿಗ್ಗೆ 05-45 ರ ಸಮಯಕ್ಕೆ ನಾನು ಮನೆಯ ಅಂಗಳದಲ್ಲಿ ಕಸ ಗುಡಿಸುತ್ತಿದ್ದಾಗ 1 ಮತ್ತು 2 ನೇ ಆರೋಪಿತರು ನನಗೆ ಸೂಳೆರಂಡೆ ಅಂತ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು. ಆದರೂ ನಾನು ಕಸ ಗುಡಿಸುತ್ತಿದ್ದೆ. ಆ ವೇಳೆಗೆ 1 ನೇ ಆರೋಪಿ ಮತ್ತು 2 ನೇ ಆರೋಪಿತರು ಒಂದು ಪಾತ್ರೆಯಲ್ಲಿ ಬಿಸಿ ಎಣ್ಣೆಯನ್ನು ತೆಗೆದುಕೊಂಡು ಬಂದು ಮುಖಕ್ಕೆ ಮತ್ತು ಮೈಗೆ ಹಾಕಿದರು. ನಂತರ ಹೋಗುವಾಗ ನಿನ್ನನ್ನು ಉಳಿಯಲು ಬಿಡುವುದಿಲ್ಲ ಅಂತ ಹೇಳಿ ಹೋದರು. ನಾನು ಬೊಬ್ಬೆ ಹಾಕುತ್ತಿದ್ದಾಗ ನನ್ನ ಮಗ ಚಾಸಾ-5, ನನ್ನ ತಮ್ಮ ಚಾಸಾ-6 ಮತ್ತು ಚಾಸಾ-7 ಮತ್ತು 8 ರವರು ಬಂದು ನನ್ನನ್ನು ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದರು. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ಪೋಲಿಸರು ಬಂದಿದ್ದು ನಾನು ನಡೆದಿದ್ದನ್ನು ಹೇಳಿದ್ದು ಅದರಂತೆ ಚಾಸಾ-9 ರವರು ದೂರನ್ನು ಬರೆದಿರುತ್ತಾರೆ. ನಾನು ಅದಕ್ಕೆ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ. ಸದರಿ ದೂರನ್ನು ನೋಡುತ್ತಿದ್ದು ನಿಪಿ-1 ಎಂದು ಗುರುತಿಸಲಾಯಿತು. ನನಗೆ ಮೈಮೇಲೆ ಮತ್ತು ಮುಖಕ್ಕೆ ಬಿಸಿ ಎಣ್ಣೆ ಹಾಕಿದ್ದರಿಂದ ಎಡಬದಿಯ ಕಿವಿ ಸಂಪೂರ್ಣವಾಗಿ ಸುಟ್ಟು ಹೋಗಿರುತ್ತದೆ. ಮುಖದ ಮೇಲೆ ಮತ್ತು ಮೈಮೇಲೆ ಸುಟ್ಟು ಹೋಗಿರುತ್ತದೆ.

ಒಂದು ತಿಂಗಳ ನಂತರ ಪುನಃ ಪೋಲೀಸ್ ಠಾಣೆಗೆ ಹೋಗಿದ್ದು ಅಲ್ಲಿ ಪೋಲೀಸರು ನನಗೆ ಎಣ್ಣೆ ಹಾಕಲು ಬಳಸಿದ ಪಾತ್ರೆ ಮತ್ತು ನಾನು ಧರಿಸಿದ್ದ ಬಟ್ಟೆ ಮತ್ತು ನಾನು ಕಸ ಗುಡಿಸುತ್ತಿದ್ದ ಪೊರಕೆಯನ್ನು ತೋರಿಸಿರುತ್ತಾರೆ. ನಾನು ಅವುಗಳನ್ನು ಗುರುತಿಸಿರುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಒಂದು ಬಾಂಡ್ಲಿ ಮತ್ತು ಬಟ್ಟೆಯನ್ನು ಬಿಳಿಯ ಬಟ್ಟೆಯಿಂದ ಸುತ್ತಿ ಸೀಲ್ ಮಾಡಿದ್ದು ಅದನ್ನು ತೆರೆಯಲು

ಎಪಿಪಿಯವರು ಅನುಮತಿ ಕೋರಿದ್ದು ಸೀಲು ಸುಸ್ಥಿತಿಯಲ್ಲಿದ್ದು ಬಿಳಿಯ ಬಟ್ಟೆಯನ್ನು ತೆರೆಯಲು ಅನುಮತಿ ನೀಡಲಾಯಿತು. ಈಗ ನ್ಯಾಯಾಲಯದ ಮುಂದೆ ಇರುವ ಒಂದು ಬಾಂಡಲಿ ಮತ್ತು ಒಂದು ನೈಟಿ ಹಾಗೂ ಒಂದು ಪೊರಕೆಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಮುಮಾ-1 ರಿಂದ 3 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಂ. ಎನ್. ಸುಬ್ರಹ್ಮಣ್ಯರಿಂದಃ**

ನನ್ನನ್ನು ಮುರ್ಡೇಶ್ವರಕ್ಕೆ ಮದುವೆ ಮಾಡಿ ಕೊಟ್ಟಿರುತ್ತಾರೆ. ನನ್ನ ಗಂಡ ಈಗ ಬದುಕಿಲ್ಲ. ಆತ 2010 ರಲ್ಲಿ ಮೃತಪಟ್ಟಿರುತ್ತಾರೆ. ಅವರು ಮೃತಪಟ್ಟ ಬಗ್ಗೆ ಕೇಸು ಆಗಲಿಲ್ಲ. ನನ್ನನ್ನು ಪೋಲೀಸರು ಕರೆದುಕೊಂಡು ಹೋಗಿಲ್ಲ. ಆತ ಹೊರಗೆ ಹೋದಾಗ ಮೃತಪಟ್ಟಿರುತ್ತಾರೆ. ನನ್ನ ಗಂಡ ಬದುಕಿದ್ದಾಗ ಗಂಡನ ಮನೆಯಲ್ಲಿ ಇದ್ದೆ. ನನ್ನ ಗಂಡನಿಗೆ ತೋಟ ಇಲ್ಲ ಮನೆ ಇದೆ. ಅದೇ ಮನೆಯಿಂದ ಮಕ್ಕಳು ಶಾಲೆಗೆ ಹೋಗುತ್ತಿದ್ದರು. ನಾನು ಅಪ್ಪನ ಮನೆಯಲ್ಲಿ 7-8 ವರ್ಷಗಳಿಂದ ಉಳಿದುಕೊಂಡಿದ್ದೆ. ಮನೆ ಇರುವ ಜಾಗದ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಸದರಿ ಮನೆ ನಮ್ಮ ತಂದೆಗೆ ಹೇಗೆ ಬಂದಿರುತ್ತದೆ ನನಗೆ ಗೊತ್ತಿಲ್ಲ. ಆ ಮನೆಯನ್ನು ನನ್ನ ತಮ್ಮ ಕಟ್ಟಿಸಿಕೊಟ್ಟಿರುತ್ತಾನೆ. ಮನೆ ಪಟ್ಟಾ ತಂದೆಯ ಹೆಸರಿನಲ್ಲಿದೆ. ಸದರಿ ಮನೆ ಯಾರ ಹೆಸರಿನಲ್ಲಿದೆ ನಾನು ಪೋಲಿಸರಿಗೆ ಹೇಳಲಿಲ್ಲ. ಮನೆಗೆ ತಮ್ಮ ಹೆಸರಿನಲ್ಲಿ ವಿದ್ಯುತ್ ಸಂಪರ್ಕ ಇದೆ. ನಮ್ಮ ತಂದೆ ವಾಸವಾಗಿದ್ದ ಮನೆ ಮತ್ತು ಸುತ್ತಲಿನ ಜಾಗವನ್ನು 1 ನೇ ಆರೋಪಿಯ ಗಂಡನಿಗೆ ಮತ್ತು ಅವರ ಸಹೋದರನಿಗೆ ಸರಕಾರದಿಂದ ಮಂಜೂರಾಗಿದೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಮನೆಯಲ್ಲಿ ಮತ್ತು ಜಾಗದಲ್ಲಿ ನನ್ನ ತಮ್ಮನಿಗೆ ಯಾವುದೇ ಹಕ್ಕಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಗೆ ನಮ್ಮ ದೊಡ್ಡಪ್ಪ ಮನೆ ಕಟ್ಟಿಸಿ ಉಳಿದುಕೊಳ್ಳಲು ಬಿಟ್ಟುಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡ ಮೃತ ಪಟ್ಟ ನಂತರ 1 ನೇ ಆರೋಪಿ ಗಂಡನೇ ಅಂತ್ಯಸಂಸ್ಕಾರದ ಎಲ್ಲಾ ಕೆಲಸಗಳನ್ನು ಮಾಡಿ ನನ್ನನ್ನು ಅವರೇ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ತಮ್ಮ ಚಾಸಾ-6 ಮೀನುಗಾರಿಕೆಗೆ ಮಲ್ಪೆಗೆ ಹೋಗುತ್ತಾನೆ. ಚಾಸಾ-5 ರವರಿಗೆ ಈಗ 22 ವರ್ಷ, 2 ನೇ ಮಗನಿಗೆ 20 ವರ್ಷ. ಅವರೂ ಸಹ ಮಲ್ಪೆ ಬೋಟಿಗೆ ಹೋಗುತ್ತಾರೆ. ನನ್ನ ತಂದೆಗೆ ನನ್ನನ್ನು ಹೊರತುಪಡಿಸಿ 2 ಜನ ಹೆಣ್ಣುಮಕ್ಕಳಿದ್ದಾರೆ. ಅವರಲ್ಲಿ ಮಹಾದೇವಿ ಘಟನೆಯ ಕಾಲಕ್ಕೆ ತಂದೆಯ ಮನೆಯಲ್ಲಿ ಇದ್ದರು. ಇನ್ನೊಬ್ಬಳು ಮುರ್ಡೇಶ್ವರದಲ್ಲಿ ಗಂಡನ ಮನೆಯಲ್ಲಿ ಇದ್ದಾಳೆ. ನನ್ನ ಮಕ್ಕಳು ಯಾವ ಯಜಮಾನರ ಬಳಿ ಮೀನು ಹಿಡಿಯಲು ಹೋಗುತ್ತಾರೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಅಗಷ್ಟ ದಿಂದ ಜೂನ್ ವರೆಗೆ ಮೀನು ಹಿಡಿಯಲು ಹೋಗುತ್ತಾರೆ. ಘಟನೆಯ ಕಾಲಕ್ಕೆ ನನ್ನ ತಮ್ಮ ಮತ್ತು ಮಕ್ಕಳು ಮನೆಯಲ್ಲಿ ಇದ್ದರು. ಕೆಲಸಕ್ಕೆ ಹೋಗಿರಲಿಲ್ಲ.

ನಾನು ಸಾಮಾನ್ಯವಾಗಿ ಬೆಳಿಗ್ಗೆ 05-30 ಕ್ಕೆ ಏಳುತ್ತೇನೆ. ಶೌಚಾಲಯಕ್ಕೆ ಹೊರಗೆ ಹೋಗುತ್ತೇವೆ. ಮನೆಯಲ್ಲಿ ಶೌಚಾಲಯ ಇಲ್ಲ. ಮನೆಯು ಎಷ್ಟು ಅಗಲ, ಉದ್ದ ಇದೆ ನನಗೆ ಗೊತ್ತಿಲ್ಲ. ಮನೆಯಲ್ಲಿ ಒಂದು ಬಚ್ಚಲು ಮನೆ ಮತ್ತು ಒಂದು ಹಾಲ್ ಮಾತ್ರ ಇದೆ. ಇನ್ನೇನೂ ಇಲ್ಲ. ಸ್ನಾನಕ್ಕೆ ಬಿಸಿ ನೀರಿನ ಹಂಡೆ ಮನೆಯ ಒಳಗೆ ಇದ್ದು ಮನೆಯ ಆಚೆಯಿಂದ ಬೆಂಕಿ ಹಾಕಲಾಗುತ್ತದೆ. ಒಲೆಗೆ ಕಟ್ಟಿಗೆ ಹಾಕಿ ಸ್ವಲ್ಪ ಸೀಮೆ

ಎಣ್ಣೆ ಹಾಕಿ ಬೆಂಕಿ ಹಾಕುತ್ತೇವೆ. ಘಟನೆಯಾದ ದಿನ ನಾನು ಬಿಸಿನೀರಿನ ಒಲೆಗೆ ಬೆಂಕಿ ಹಾಕಿರಲಿಲ್ಲ. ನೀರಿನ ಒಲೆಗೆ ಬೆಂಕಿ ಹಾಕಲು ಹೋಗಿ ಸೀಮೆ ಎಣ್ಣೆ ಮೈಗೆ ತಾಗಿ ಬೆಂಕಿ ಹತ್ತಿಕೊಂಡಿದೆ ಎಂದರೆ ಸರಿಯಲ್ಲ.

ಮನೆಯು ಪಶ್ಚಿಮ ದಿಕ್ಕಿಗೆ ಮುಖ ಮಾಡಿಕೊಂಡಿದೆ. ಮನೆಗೆ ಒಂದೇ ಬಾಗಿಲು ಇದೆ. ನಮ್ಮ ತಂದೆಯ ಮುಂದೆ ಆರೋಪಿತರ ಮನೆ ಇದೆ. ಸುಮಾರು 10 ಅಡಿ ದೂರದಲ್ಲಿದೆ. ಆರೋಪಿತರ ಮನೆ ಪೂರ್ವಕ್ಕೆ ಮುಖ ಮಾಡಿದೆ. ಆರೋಪಿತರ ಮನೆಗೆ 2 ಬಾಗಿಲು ಇದೆ. ಆರೋಪಿತರ ಮನೆಯಲ್ಲಿ ಮಲಗಲು ಬೇರೆ ಕೋಣೆ, ಅಡಿಗೆ ಮಾಡಲು ಬೇರೆ ಕೋಣೆ ಮತ್ತು ಸ್ನಾನಕ್ಕೆ ಬೇರೆ ಕೋಣೆ ಇದೆ ಎಂದರೆ ಸರಿ. ಆರೋಪಿತರ ಅಡಿಗೆ ಮನೆ ಮನೆಯ ಕೊನೆಯಲ್ಲಿದೆ ಎಂದರೆ ಸರಿಯಲ್ಲ, ಮುಂಭಾಗದಲ್ಲೇ ಇದೆ. ತಂದೆಯ ಮನೆಯ ಹಿಂದೆ ರವಿ ಎಂಬುವವರ ಮನೆ ಇದೆ. ತಂದೆಯ ಮನೆಯ ಹಿಂಭಾಗದಲ್ಲಿ ಕೆಲವು ಮನೆಗಳಿವೆ. ಈಗ ಸಾಕ್ಷಿಗೆ ಒಂದು ಫೋಟೋ ತೋರಿಸಲಾಗಿ ಅದರಲ್ಲಿರುವುದು ತಂದೆ ಮನೆ ಎಂದರೆ ಸರಿ ಎನ್ನುತ್ತಾರೆ. ಸದರಿ ಫೋಟೋವನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ಫೋಟೋವನ್ನು ಮಳೆಗಾಲದಲ್ಲಿ ತೆಗೆಯಲಾಗಿದೆ. ಸದರಿ ಮನೆಯ ಹಿಂಭಾಗದಲ್ಲಿ ಒಂದು ಕೇರಿ ಇದೆ ಎಂದರೆ ಸರಿ. ಆದರೆ ಮನೆಗಳು ಸ್ವಲ್ಪ ದೂರದಲ್ಲಿ ಇದೆ. ನಿಡಿ-1ರ ಫೋಟೋದಲ್ಲಿ ನಮ್ಮ ಮನೆಯ ಹಿಂಭಾಗದಲ್ಲಿ ಇರುವ ಹಸಿರು ಬಣ್ಣದ ಮನೆ ದುರ್ಗು ಹರಿಕಂತ್ರ ರವರ ಮನೆ, ಕಲ್ಲಿನಿಂದ ಕಟ್ಟಿರುವ ಮನೆ ರವಿ ಅವರ ಮನೆ. ನಿಡಿ-1ರ ಫೋಟೋದ ರೀತ್ಯಾ ಆರೋಪಿತರ ಮನೆ ಎದುರಿನಲ್ಲಿ ಇಲ್ಲ ಎಂದರೆ ನಮ್ಮ ಮನೆಯ ಎದುರಿನಿಂದ ನಿಂತು ನೋಡಿದರೆ ಕಾಣುವ ರೀತಿ ಎದುರಿಗೆ ಇದೆ ಎನ್ನುತ್ತಾರೆ. ಮನೆಯ ಹತ್ತಿರದಲ್ಲಿ ಮಂಕಿಗೆ ಬರುವ ಡಾಂಬರ ರಸ್ತೆ ಇದೆ ಎಂದರೆ ಸರಿ. ನಮ್ಮ ಮನೆಯ ಪಕ್ಕದಲ್ಲಿ ಬೋಟಿಗೆ ಹಾಕುವ ಎಣ್ಣೆ ಡ್ರಮ್ಮನ್ನು ಇಡಲಾಗಿದೆ ಎಂದರೆ ಅದನ್ನು ಆರೋಪಿತರು ಇಟ್ಟಿದ್ದಾರೆ ಎನ್ನುತ್ತಾರೆ. ಸದರಿ ಮನೆಯ ಹತ್ತಿರ ಸಮುದ್ರಕ್ಕೆ ಹೋಗುವ ರಸ್ತೆ ಇದೆ ಎಂದರೆ ಸರಿ. ಆ ರಸ್ತೆಯಲ್ಲಿ ಬೆಳಿಗ್ಗೆ ಸಮುದ್ರಕ್ಕೆ ಹೋಗುವವರು ಓಡಾಡುತ್ತಿರುತ್ತಾರೆ ಎಂದರೆ ಸರಿ. ಡಾಂಬರ ರಸ್ತೆಯಲ್ಲಿ ಜನ ಓಡಾಡುತ್ತಿರುತ್ತಾರೆ ಎಂದರೆ ಸರಿ. ಮನೆಯ ಮುಂದೆ ಉಸುಕಿನಿಂದ ಕೂಡಿದೆ. ಮನೆಯ ಪಕ್ಕದಲ್ಲಿ ಸಮುದ್ರಕ್ಕೆ ಹೋಗುವ ಕಾಲುದಾರಿ ಇದೆ. ಮನೆಯ ಮುಂಭಾಗದಲ್ಲಿ ಯಾವುದೇ ಅಂಗಳ ಇಲ್ಲ ಎಂದರೆ ಉಸುಕಿನಿಂದ ಕೂಡಿದ ಜಾಗ ಇದೆ. ನಾನು ಆ ದಿನ ನಮ್ಮ ಮನೆಯ ಕಡೆಗೆ ಬೆನ್ನು ಮಾಡಿಕೊಂಡು ಕಸ ಗುಡಿಸುತ್ತಿದ್ದೆ. ಮನೆಯ ಹತ್ತಿರದಿಂದ ಕಸವನ್ನು ಗುಡಿಸುತ್ತಾ ಕೊನೆಯ ಕಡೆಗೆ ಕಸವನ್ನು ತಳ್ಳಿ ಹಾಕುವ ಕಾಲಕ್ಕೆ ಎಣ್ಣೆ ಹಾಕಲಾಗಿರುತ್ತದೆ. ಸದರಿ ಜಾಗದಲ್ಲಿ ಜನ ಓಡಾಡುವುದಿಲ್ಲ. ನಾವು ಆ ಜಾಗವನ್ನು ಪಾತ್ರೆ ತೊಳೆಯಲು ಮತ್ತು ಬಿಸಿ ನೀರಿನ ಒಲೆಗೆ ಬೆಂಕಿ ಹಿಡಿಸಲು ಬಳಸುತ್ತೇವೆ. ಮನೆಯಿಂದ ಸುಮಾರು 8-10 ಅಡಿ ಹತ್ತಿರದಲ್ಲಿ ಇದ್ದಾಗ ಘಟನೆ ನಡೆದಿರುತ್ತದೆ. ಅದು ತೆಂಗಿನ ಮರದ ಹತ್ತಿರ ಆಗಿರುತ್ತದೆ. ಆರೋಪಿತರು ನನಗೆ ಎಣ್ಣೆ ಹಾಕುವ ಮೊದಲು ನನಗೂ ಆರೋಪಿತರಿಗೂ ಯಾವುದೇ ಮಾತುಕತೆ ಆಗಿರಲಿಲ್ಲ. ನನಗೆ ಮೈಮೇಲೆ ಎಣ್ಣೆ ಸುರಿದಾಗಲೇ ಎಣ್ಣೆ ಸುರಿದಿದ್ದು ಗೊತ್ತಾಯಿತು. ಎಣ್ಣೆ ಸುರಿಯುವ ಮೊದಲು ಯಾರು ಎಣ್ಣೆ ತೆಗೆದುಕೊಂಡು ಬರುತ್ತಿದ್ದರು ಮತ್ತು ಯಾರು ಸುರಿದರು ಅಂತ ನೋಡಲಿಲ್ಲ. ನನ್ನ ಎದುರಿನಿಂದ ಬಂದು ಎಣ್ಣೆ ಹಾಕಲಿಲ್ಲ. ಹಿಂದಿನಿಂದ ಬಂದು ಹಾಕಿರುತ್ತಾರೆ. ನನಗೆ ಊರಿನಲ್ಲಿ ಯಾರೂ ಶತ್ರುಗಳಿಲ್ಲ. ನಮ್ಮ ಮೇಲೆ ಆರೋಪಿತರಿಗೆ ಅಷ್ಟೇ

ಕೋಪ. ಆದ್ದರಿಂದ ಅವರೇ ಹಾಕಿರುತ್ತಾರೆ. ನಾನು ಕೂಗಾಡಿದಾಗ ಅಕ್ಕಪಕ್ಕದವರು ಯಾರೂ ಬರಲಿಲ್ಲ. ರಸ್ತೆಯ ಮೇಲೆ ಯಾರೂ ತಿರುಗಾಡುತ್ತಿರಲಿಲ್ಲ. ಸಮುದ್ರಕ್ಕೆ ಮೀನು ಹಿಡಿಯಲು ಹೋಗುತ್ತಿದ್ದವರು ಬಂದರಾ ಎಂದರೆ ಯಾರೂ ಹೋಗುತ್ತಿರಲಿಲ್ಲ.

ನನ್ನ ಮಗ ಬಣ್ಣ ಬಣ್ಣದ ಪಾರಿವಾಳಗಳನ್ನು ಸಾಕಿದ್ದಾನೆ. ಪಾರಿವಾಳ ನೋಡಲು ನಮ್ಮ ಕೇರಿಯವರು ಸಮಯವಲ್ಲದ ಸಮಯದಲ್ಲಿ ಬರುತ್ತಿದ್ದರು ಎಂದರೆ ಊರಿನವರು ಬೆಳಕಿದ್ದಾಗ ಬರುತ್ತಿದ್ದರು ಎನ್ನುತ್ತಾರೆ. ಪಾರಿವಾಳಗಳನ್ನು ಇಡಬಾರದು, ಮಾರಾಟ ಮಾಡಬಾರದು ಎಂದು ಊರಿನ ಮುಖಂಡರು ಹೇಳಿದ್ದರು ಎಂದರೆ ಸರಿಯಲ್ಲ. ಊರಿನ ಕೇರಿಯವರೂ ಸಹ ಪಾರಿವಾಳ ಸಾಕಬಾರದು ಎಂದು ಗಲಾಟೆ ಮಾಡಿದ್ದರು ಎಂದರೆ ಸರಿಯಲ್ಲ. ಅಕ್ಕಪಕ್ಕದ ಮನೆಯವರ ಜೊತೆ ಘಟನೆಯ ನಂತರ ಚೆನ್ನಾಗಿದ್ದೇವೆ ಎಂದರೆ ಮೊದಲಿನಿಂದಲೂ ಚೆನ್ನಾಗಿದ್ದೇವೆ ಎನ್ನುತ್ತಾರೆ. ನನ್ನನ್ನು ಆಸ್ಪತ್ರೆಗೆ ನನ್ನನ್ನು ಅತ್ತಿಗೆ ಕರೆದುಕೊಂಡು ಹೋಗಿರುತ್ತಾರೆ. ಆಕೆಯ ಮನೆ 4 ಮನೆಯ ಆಚೆ ಇದೆ. ನಾನು ಕೂಗಾಡಿದಾಗ ನನ್ನ ಮಗ ಹೋಗಿ ಆಕೆಯನ್ನು ಕರೆದುಕೊಂಡು ಬಂದಿರುತ್ತಾನೆ. ನನ್ನ ಅತ್ತಿಗೆ ಬರುವವರೆಗೆ ನಾನು ಮನೆಯ ಮೆಟ್ಟಿಲಿನ ಮೇಲೆ ಕುಳಿತಿದ್ದೆ. ಮಂಕಿಯಲ್ಲಿ ಸರಕಾರಿ ಆಸ್ಪತ್ರೆ ಇದೆ. ನನ್ನನ್ನು ನೇರವಾಗಿ ಹೊನ್ನಾವರ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು. ಹೊನ್ನಾವರದಿಂದ ನೇರವಾಗಿ ಮಂಗಳೂರಿನ ವೆನಲಾಕ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಹೊನ್ನಾವರ ಸರಕಾರಿ ಆಸ್ಪತ್ರೆಯಲ್ಲಿ ನನ್ನ ಅತ್ತಿಗೆ ಮಾತ್ರ ಇದ್ದರು. ತದನಂತರದಲ್ಲಿ ನನ್ನ ತಮ್ಮ ಮತ್ತು ಮಕ್ಕಳು ಆಸ್ಪತ್ರೆಗೆ ಬಂದಿರುತ್ತಾರೆ. ಅತ್ತಿಗೆ, ತಮ್ಮ ಮತ್ತು ನನ್ನ ಮಕ್ಕಳನ್ನು ಹೊರತುಪಡಿಸಿ ಆಸ್ಪತ್ರೆಗೆ ಬೇರೆ ಯಾರೂ ಬಂದಿರಲಿಲ್ಲ. ಪೋಲೀಸರು ಸುಮಾರು 10-00 ಗಂಟೆಗೆ ಆಸ್ಪತ್ರೆಗೆ ಬಂದಿರಬಹುದು. ನನಗೆ ಓದಲು ಬರುವುದಿಲ್ಲ. ದೂರಿಗೆ ಹೆಬ್ಬೆಟ್ಟಿನ ಗುರುತು ಹಾಕಿದ ದಿನ ಬೇರೆ 7-8 ದಾಖಲೆಗಳಿಗೆ ಆಸ್ಪತ್ರೆಯಲ್ಲಿ ಹೆಬ್ಬೆಟ್ಟಿನ ಗುರುತು ಹಾಕಿದ್ದೇನೆ. ಆ 7-8 ದಾಖಲೆಗಳು ಏನು ಅಂತ ನನಗೆ ಗೊತ್ತಿಲ್ಲ.

ವೆನಲಾಕ್ ಆಸ್ಪತ್ರೆಗೆ ಹೋಗುವಾಗ ಅಂಬುಲನ್ಸ ಅಪಘಾತಕ್ಕೊಳಗಾಗಿತ್ತು. ಸದರಿ ಅಪಘಾತದಿಂದ ಗಾಯಗಳಾಗಿವೆ. ಎಣ್ಣೆಯಿಂದ ಯಾವುದೇ ಗಾಯಗಳು ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಮೇಲಿನ ದ್ವೇಷಕ್ಕೆ ಅವರ ಮೇಲೆ ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಚಿಮಣಿಯಿಂದ ನಾನು ಸುಟ್ಟುಕೊಂಡಿದ್ದು ಅದರ ದುರುಪಯೋಗಪಡಿಸಿಕೊಂಡು ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**